# ಜಪಾನೀ ಕವಿ ಬಾಶೊ ಹೈಕುಗಳು



ಈ ಸುಂದರ ಪಾತ್ರೆಗೆ
ಇನ್ನಷ್ಟು ಹೂ ಅಲಂಕರಿಸುವ
ಏಕೆಂದರೆ ಅಕ್ಕಿ ಇಲ್ಲ!

---

ಮಂಜಿನ ಹನಿಯೇ ನಿನ್ನ ಸಿಹಿನೀರಿನಲ್ಲಿ
ಜೀವನದ ಈ ಕತ್ತಲ ಕೈಗಳನ್ನು
ಅದ್ದಿ ಶುದ್ಧಿಯಾಗುವೆ!

---



ಇಲ್ಲಿ ಸಾವಿರ ನಾಯಕರು
ಮಹಾವಿಜಯದ ಶಪಥಗೈವರು
ಎತ್ತರದ ಹುಲ್ಲು ಅವರ ಮಹಾಸ್ಮಾರಕ!

ಚಳಿಗಾಲದ ಮೊದಲ ಮಳೆ
ಹೆಣೆದ ಟೊಪ್ಪಿಯನ್ನ ನೀನೂ
ಬಳಸು ಬಾ ಬಡ ಕೋತಿಯೇ.

---

ಜೀರುಂಡೆಯ ಅಳುವಿನಲ್ಲಿ
ಅದು ಎಷ್ಟು ಬೇಗ ಸಾಯುವುದೆಂದು
ಯಾವ ಸೂಚನೆಯೂ ಸಿಗದು!

---

ಒಂದು ಹಳೆಯ ನಿಶ್ಯಬ್ದ ಕೊಳ...
ಕಪ್ಪೆ ಹಾರಿದ ಸಪ್ಪಳ
ಮತ್ತೆ ಮೌನ!

---

ಕೋಗಿಲೆ ಅಳುವಾಗ
ಬಿದಿರಿನ ಮೆಳೆಯ ನಡುವಿಂದ
ಬಿದಿಗೆ ಚಂದ್ರ ಹೊಳೆಯುವ

